ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜನವರಿ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-19 ಸಂಚಿಕೆ-1 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾಟ್ರೋಫಿ–2019 ಹಾಗೂ ಒಳಾಂಗಣ ಮಹಿಳಾ ಮತ್ತು ಮಕ್ಕಳ ಕ್ರೀಡೆಗಳು


ಶ್ರೀಶಾರದಾ ಟ್ರೋಫಿ ವಿಜೇತ ತಂಡ ನಂದಳಿಕೆ-ಎ



ಮಹಿಳಾ ಕ್ರೀಡಾಕೂಟದ ಸಮಾರೋಪ ಸಭೆ

ತಾ.06–01–2019ರ ರವಿವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿಯ ವತಿಯಿಂದ ಇಪ್ಪತ್ತೇಳನೆಯ ವರ್ಷದ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಅದ್ದೂರಿಯಾಗಿ ನೆರವೇರಿತು. ನಮ್ಮ ಸಮಾಜದ ಯುವಕರಿಗಾಗಿ ನಡೆಯುತ್ತಿರುವ ಈ ಪಂದ್ಯಾಟದಲ್ಲಿ ಈ ವರ್ಷ ಒಟ್ಟು ಹನ್ನೆರಡು ತಂಡಗಳು ಭಾಗವಹಿಸಿದ್ದವು. ಕುಂಜಿಬೆಟ್ಟಿನ ಎಂ.ಜಿ.ಎಂ ಕಾಲೇಜಿನ ಕ್ರೀಡಾಂಗಣದಲ್ಲಿ ಬೆಳಿಗ್ಗೆ ಒಂಬತ್ತು ಗಂಟೆಗೆ ನಮ್ಮ ಸಮಾಜದ ಹಿರಿಯರಾದ ಶ್ರೀವಮೂಂಟ್ರಾಡಿ ವಮೋಹನ ರಾವ್, ಪೂರ್ವಾಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಹಾಗೂ ನಿಕಟ ಪೂರ್ವಾಧ್ಯಕ್ಷರಾದ ಶ್ರೀ ವೈ. ಭುವನೇಂದ್ರ ರಾವ್‌ಗಳವರು ಕ್ರಿಕೆಟ್ ಪಂದ್ಯಾಟವನ್ನು ಉದ್ಘಾಟಿಸಿ ಕ್ರೀಡಾಳುಗಳಿಗೆ ಶುಭ ಹಾರೈಸಿದರು. ಮಧ್ಯಾಹ್ನದ ಭೋಜನದ ನಂತರ ನಂದಳಿಕೆ–ಎ ತಂಡ ಹಾಗೂ ಬೆಂಗಳೂರಿನ ಎಫ್.ಡಬ್ಲ್ಯೂ.ಎಫ್ ತಂಡಗಳ ನಡುವೆ ಫೈನಲ್ ಪಂದ್ಯಾಟ ನಡೆಯಿತು. ಈ ಪಂದ್ಯದಲ್ಲಿ ನಂದಳಿಕೆ–ಎ ತಂಡವು ಜಯಗಳಿಸಿತು. ಸಂಜೆ ನಡೆದ ಬಹುಮಾನ ವಿತರಣಾ ಸಮಾರಂಭಕ್ಕೆ ಅಹಮದಾಬಾದ್ ನಲ್ಲಿ ಕಾರ್ಪೋರೇಶನ್ ಬ್ಯಾಂಕಿನ ಡಿ.ಜಿ.ಎಂ ಆಗಿರುವ ಶ್ರೀ ಪೆರ್ಡೂರು ಕೃಷ್ಣರಾಜ ರಾಯರು ಅತಿಥಿಯಾಗಿ ಆಗಮಿಸಿದ್ದರು. ಸಂಘದ ಸಲಹೆಗಾರರಾದ ಶ್ರೀಪ್ರಫುಲ್ಲಚಂದ್ರ ರಾಯರು, ಶ್ರೀ ಸಿ.ಎಸ್ ರಾವ್ ಹಾಗೂ ಶ್ರೀ ವೈ. ಭುವನೇಂದ್ರರಾವ್‌ರವರು, ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್, ಕೋಶಾಧಿಕಾರಿಗಳಾದ ಶ್ರೀ ಬಿ ಜಯರಾಮರಾವ್, ಶ್ರೀ ವಮೂಂಟ್ರಾಡಿ ಮೋಹನ ರಾವ್ ಹಾಗೂ ಯುವವೇದಿಕೆಯ ಅಧ್ಯಕ್ಷ ಡಾ ಸಂತೋಷ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಪ್ರಕಾಶ್ ರಾವ್ ಕೊಲ್ಲೆ, ಶ್ರೀ ಹೆಚ್.ಎನ್.ಶಾನುಭಾಗ್, ಶ್ರೀ ಸುಬ್ರಹ್ಮಣ್ಯ ಶರ್ಮ, ಶ್ರೀ ವೈ. ಸ್ವರೂಪ್ ರಾವ್, ಶ್ರೀ ಪ್ರವೀಣ್ ಕುಮಾರ್ ಮತ್ತು ಶ್ರೀ ಕೃಷ್ಣರಾಜ ರಾವ್ ಉಂಡಾರು, ಪಂದ್ಯಾಟಗಳನ್ನು ನಿರ್ವಹಿಸಿದರು. ಕಾರ್ಯದರ್ಶಿ ಯು.ಅರವಿಂದ ಕುಮಾರ್ ಸ್ವಾಗತಿಸಿ ಶ್ರೀ ಪ್ರಭಾಕರ ಭಂಡಿ ಧನ್ಯವಾದವಿತ್ತರು. ಶ್ರೀ ಕೃಷ್ಣಕುಮಾರ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಬಿ. ಕೃಷ್ಣಮೂರ್ತಿ ರಾವ್, ಶ್ರೀ ತಂತ್ರಾಡಿ ಜಗದೀಶ ರಾವ್ ಊಟೋಪಚಾರಗಳ ವ್ಯವಸ್ಥೆ ಮಾಡಿದರು. ನಿರ್ಣಾಯಕರುಗಳಾಗಿ ಶ್ರೀ ಉಮೇಶ್ ಉಡುಪಿ, ಶ್ರೀ ಶಶಿಕಿರಣ್ ಕಟಪಾಡಿ, ಶ್ರೀ ಸದಾಶಿವ ಮಣಿಪಾಲ, ಶ್ರೀ ಪ್ರತೀಕ್ ಮಣಿಪಾಲ ಸಹಕರಿಸಿದರು.

ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದೊಂದಿಗೆ ಮಕ್ಕಳಿಗೆ ಜ್ಯೂನಿಯರ್ ಕ್ರಿಕೆಟ್ ಪರಿಮಿತ ಓವರ್‌ಗಳ ಪಂದ್ಯಾಟವನ್ನೂ ನಡೆಸಲಾಯಿತು. ಈ ಪಂದ್ಯಾಟದಲ್ಲಿ ವಮಂದಾರ್ತಿಯು ಶ್ರೀ ದುರ್ಗಾ ಕ್ರಿಕೆಟರ್ ತಂಡವು ಜಯಗಳಿಸಿತು. ಇದೇ ಸಂದರ್ಭದಲ್ಲಿ ಶ್ರೀ ಶಾರದಾ ಮಂಟಪದಲ್ಲಿ ಮಹಿಳಾ ವೇದಿಕೆಯಿಂದ ಮಕ್ಕಳಿಗೆ ಹಾಗೂ ಮಹಿಳೆಯರಿಗಾಗಿ ಪಂದ್ಯಾಗಳನ್ನು ಆಯೋಜಿಸಲಾಗಿತ್ತು. ಬೆಳಗಿನ ಉಪಾಹಾರದ ನಂತರ ಮಹಿಳಾ ವೇದಿಕೆಯ ಹಿರಿಯ ಸದಸ್ಯೆಯರಾದ ಶ್ರೀ ಜಯಲಕ್ಷ್ಮೀ ಮುರಳೀಧರ ರಾವ್ ದೀಪಬೆಳಗಿಸಿ ಒಳಾಂಗಣ ಮಹಿಳಾ ಮತ್ತು ಮಕ್ಕಳ ಕ್ರೀಡೆಗಳನ್ನು ಉದ್ಘಾಟಿಸಿದರು. ನಂತರ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ವಿವಿಧ ವಮೋಜಿನ ಪಂದ್ಯಾಟಗಳನ್ನು ನೆರವೇರಿಸಲಾಯಿತು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪೂರ್ಣಿಮಾ ಪಿ.ರಾವ್, ಸಂಚಾಲಕಿ ಶ್ರೀಮತಿ ರಜನಿ ಹೆಬ್ಬಾರ್, ಡಾ। ವಿದ್ಯಾ ಎಸ್. ರಾವ್, ಶ್ರೀಮತಿ ಉಷಾ ಮೋಹನ್ ದೇವ್, ಶ್ರೀಮತಿ ಹರಿಣಾಕ್ಷಿ ನಾಗರಾಜ್, ಶ್ರೀಮತಿ ಮಹಾಲಕ್ಷ್ಮೀ, ಶ್ರೀಮತಿ ಸ್ಮಿತಾ, ಶ್ರೀಮತಿ ಸುನೀತಾ, ಶ್ರೀಮತಿ ಸಂಧ್ಯಾ ಮತ್ತು ಶ್ರೀಮತಿ ಗೀತಾರವರು ಕ್ರೀಡೆಗಳನ್ನು ನಡೆಸಿಕೊಟ್ಟರು. ಭೋಜನಾನಂತರದ ಸಭಾಕಾರ್ಯಕ್ರಮಕ್ಕೆ ಮೂಡುಬೆಳ್ಳೆಯ ಖ್ಯಾತ ದಂತವೈದ್ಯೆ ಡಾ। ಸಂಜನಾ ರಾವ್ ಅತಿಥಿಯಾಗಿ ಆಗಮಿಸಿ ಹಲ್ಲುಗಳ ಆರೋಗ್ಯವನ್ನು ಕಾಪಾಡುವ ಕುರಿತು ಮಾಹಿತಿ ನೀಡಿದರು. ಕುಮಾರಿ ಮಾನಸಾ ಪ್ರಾರ್ಥನೆ ಮಾಡಿದರು. ಬಹುಮಾನ ವಿತರಣೆಯನ್ನು ಶ್ರೀಮತಿ ಮೀರಾ ನಿರ್ವಹಿಸಿದರು. ಶ್ರೀಮತಿ ಜ್ಯೋತಿ ಧನ್ಯವಾದವಿತ್ತರು.

## ಶ್ರೀ ಅನಂತಪುರ ಈಶ್ವರಯ್ಯ ಅಸ್ತಂಗತ



ಹಿರಿಯ ಪತ್ರಕರ್ತ ಕಲಾ ವಿಮರ್ಶಕ, ಬರಹಗಾರ, ವಿಶಿಷ್ಟ ಛಾಯಗ್ರಾಹಕ ಮತ್ತು ನಮ್ಮ ಸಮಾಜದ ಕಣ್ಮಣಿ ಶ್ರೀ ಅನಂತಪುರ ಈಶ್ವರಯ್ಯ ತಾ.30–12–2018ರಂದು ನಿಧನ ಹೊಂದಿದರು

ಇವರು ಕುಂಬಳೆಯ ಸಮೀಪದ ಅನಂತಪುರದವರು. ತಂದೆ ನಾರಾಯಣಯ್ಯ ಮತ್ತು ತಾಯಿ ವೆಂಕಟಲಕ್ಷ್ಮೀ. ಬಾಲ್ಯದಿಂದಲೇ ಯಕ್ಷಗಾನ ಹಾಗೂ ಸಂಗೀತದ ಅಲೆಗಳೊಂದಿಗೆ ಬೆಳೆದವರು. ಹೈಸ್ಕೂಲಿನ ನಂತರ ಎಂ.ಜಿ.ಎಮ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಈ ಸಂದರ್ಭದಲ್ಲಿ ತನ್ನ ಸಾಹಿತ್ಯ ಕ್ಷೇತ್ರದ ಸಾಧನೆಗಳಿಂದ ಗುರುಗಳಾದ ಶ್ರೀ ಕು.ಶಿ.ಹರಿದಾಸ ಭಟ್ಟರ ಮೆಚ್ಚುಗೆಗೆ ಪಾತ್ರರಾಗಿ ಅವರ ಶಿಫಾರಾಸಿನ ಮೇರೆಗೆ ಪದವಿಯ ನಂತರ "ಉದಯವಾಣಿ" ಬಳಗವನ್ನು ಸೇರಿದರು. ಈ ಪತ್ರಿಕೆಯ "ಕಲಾವಿಹಾರ" ಪುರವಣಿಯ ಸಂಪಾದಕರಾಗಿ ತಾನೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದರು ಹಾಗೂ ತನ್ನೊಂದಿಗೆ ಇನ್ನೂ ಹಲವರಿಗೆ ಮಾರ್ಗದರ್ಶಿಯಾಗಿ ಬೆಳೆದರು. ಮುಂದೆ "ತುಷಾರ" ಮಾಸಿಕದ ಸಂಪಾದಕರಾಗಿ ತುಷಾರ ಪತ್ರಿಕೆಗೆ ತನ್ನ ಛಾಪು ಒತ್ತಿದರು. ಹೀಗೆ ಮೂರೂವರೆ ದಶಕಗಳ ಕಾಲ ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು.

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದೊಂದಿಗೆ ನಿಕಟವಾಗಿದ್ದ ಶ್ರೀ ಈಶ್ವರಯ್ಯನವರ ಮಾರ್ಗದರ್ಶನದಲ್ಲೇ ಶ್ರೀ ಶಾರದಾ ಪತ್ರಿಕೆ ಬೆಳೆದಿದೆ. ಪತ್ರಿಕೆಗೆ ಹನ್ನೆರಡು ತುಂಬಿದ ಸಮಾರಂಭಕ್ಕೆ ಆಗಮಿಸಿ ಶ್ರೀಯುತರು ಹಿತವಚನಗಳನ್ನು ನೀಡಿದ್ದರು. ಸಂಘದ ವತಿಯಿಂದ ಹಲವಾರು ಸಂಧರ್ಭದಲ್ಲಿ ಸನ್ಮಾನವನ್ನು ಸ್ವೀಕರಿಸಿ ಆಶೀರ್ವದಿಸಿದ್ದಾರೆ. ನಮ್ಮ ಸಮಾಜದ ಉದಯೋನ್ಮುಖ ಬರಹಗಾರರನ್ನು ಹುರಿದುಂಬಿಸಿ ಪ್ರೋತ್ಸಾಹಿಸಿದ್ದಾರೆ. ಹೀಗೆ ತನ್ನ ಸರಳ ಹಾಗೂ ಪ್ರೀತಿಪೂರ್ವಕ ನಡೆನುಡಿಗಳಿಂದ ನಮ್ಮ ಸಮಾಜದೊಳಗೂ ಸಾರ್ವಜನಿಕ ಜೀವನದಲ್ಲೂ ಅಪಾರ ಅಭಿಮಾನಿಗಳನ್ನು ಹೊಂದಿದ್ದ ಶ್ರೀ ಈಶ್ವರಯ್ಯನವರ ನಿಧನ ತುಂಬಲಾಗದ ನಷ್ಟವಾಗಿದೆ. ಶ್ರೀಯುತರ ಅಗಲಿಕೆಯ ದುಃಖವನ್ನು ಬರಿಸುವ ಶಕ್ತಿಯನ್ನು ಶ್ರೀಶಾರದೆಯು ಅವರ ಕುಟುಂಬಸ್ಥರಿಗೆ ಹಾಗೂ ಅವರ ಅಭಿಮಾನಿಗಳಿಗೆ ನೀಡಲಿ ಎಂದು ಪ್ರಾರ್ಥಿಸುತ್ತ ಶ್ರೀ ಶಾರದಾ ಬಳಗವು ತನ್ನ ಅಂತಿಮ ನಮನಗಳನ್ನು ಸಲ್ಲಿಸುತ್ತಿದೆ.

## ಧನ್ಯವಾದಗಳು

ಶ್ರೀ ಶಾರದಾ ಟ್ರೋಪಿ ಕ್ರಿಕೆಟ್ ಹಾಗೂ ಮಹಿಳಾ ಹಾಗೂ ಮಕ್ಕಳ ಪಂದ್ಯಾಕೂಟದ ಯಶಸ್ಸಿಗೆ ಕಾರಣೀಭೂತರಾದ ಎಲ್ಲಾ ಸದಸ್ಯರಿಗೆ, ಭಾಗವಹಿಸಿದ ತಂಡಗಳಿಗೆ ಹಾಗೂ ಕ್ರೀಡಾಪಟುಗಳಿಗೆ, ತೀರ್ಪುಗಾರರಿಗೆ, ದಾನಿಗಳಿಗೆ ಮತ್ತು ಅತಿಥಿಗಳಿಗೆ ಆಡಳಿತ ಮಂಡಳಿಯ ಧನ್ಯವಾದಗಳು.

## ಪ್ರವಾಸ :

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಯುವ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ತಾ.20–01–2019ರ ರವಿವಾರದಂದು ನೀಲಾವರ ದೇವಸ್ಥಾನ-ಗೋಶಾಲೆ-ಸೂರಾಲು ಅರಮನೆ, ಅಂಜಲಿ ವಾಟರ್ ಪಾರ್ಕ್ ಹಾಗೂ ಇನ್ನಿತರ ಆಕರ್ಷಕ ಸ್ಥಳಗಳಿಗೆ ಪ್ರವಾಸವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 8-00 ಗಂಟೆಗೆ ಶ್ರೀಶಾರದಾ ಮಂಟಪದಿಂದ ಹೊರಟು ಸಾಯಂಕಾಲ ವಾಪಾಸು ಬರಲಾಗುವುದು. ಪ್ರವಾಸ ಶುಲ್ಕ ಅಂದಾಜು ತಲಾ ರೂ.700/-. ತಮ್ಮ ಹೆಸರುಗಳನ್ನು ಶ್ರೀಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ (9448108920, 0820-2520754), ಯುವ ವೇದಿಕೆಯ ಅಧ್ಯಕ್ಷ ಡಾ। ಸಂತೋಷ್ ರಾವ್ (9900411040) ಹಾಗೂ ಜತೆ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ (9449254846) ಇವರಲ್ಲಿ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀಶಾರದಾ ಪತ್ರಿಕೆಯ ಓದುಗರಿಗೆ ಮಕರಸಂಕ್ರಾತಿ ಹಬ್ಬದ ಶುಭಾಶಯಗಳು

# ಸಂಪಾದಕೀಯ.....

**– ಡಾ। ವೈ. ಸುದರ್ಶನ್ ರಾವ್**

ಶ್ರೀ ಶಾರದಾ ಮಂಟಪ ಸ್ಥಾಪನೆಯಾದದ್ದು 1972ನೆಯ ಇಸವಿಯಲ್ಲಿ. ಆಗ ಹೆಚ್ಚಿನ ವಿವಾಹಗಳು ನಡೆಯುತ್ತಿದ್ದದ್ದು ಒಂದೋ ವಧುವಿನ ಮನೆಯಲ್ಲಿ ಇಲ್ಲವೇ ಹತ್ತಿರದ ದೇವಸ್ಥಾನದ ಪೌಳಿಯಲ್ಲಿ. ಈಗಲೂ ಆಗೊಮ್ಮೆ ಈಗೊಮ್ಮೆ ಈ ತರಹದ ವಿವಾಹಗಳು ನಡೆದು ಹಿಂದಿನ ದಿನಗಳನ್ನು ನೆನಪಿಸುವುದುಂಟು. ಆದರೆ ಆಗ ದೇವಸ್ಥಾನದ ಪೌಳಿಯಲ್ಲಿ ನಡೆಯುವ ವಿವಾಹಗಳಿಗೆ ಪಂಕ್ತಿಬೇಧದ ತಾಪತ್ರಯ ಕಾಡುತ್ತಿತ್ತು. ಇತ್ತೀಚೆಗೆ ನಾನೂ ಇಂತಹದೇ ದೇವಸ್ಥಾನದ ಚೌಕಿಯಲ್ಲಿ ನಡೆದ ವಿವಾಹಕ್ಕೆ ಭೇಟಿಯಿತ್ತು ಪಂಕ್ತಿಶ್ರೇಷ್ಟರ ಭೋಜನ ಮುಕ್ತಾಯವಾಗುವ ತನಕ ಕಾಯಬೇಕಾದ ಪ್ರಸಂಗ ಬಂದಾಗ ಶ್ರೀಶಾರದಾ ಮಂಟಪವನ್ನು ನಮ್ಮ ಹಿರಿಯರು ಹಠ ಹಿಡಿದು ಕಟ್ಟಿದ್ದುದರ ಮರ್ಮವನ್ನರಿತೆ. ಶ್ರೀ ಶಾರದಾಮಂಟಪ ನಂತರ ನಮ್ಮವರಿಗೆ ಮಾತ್ರವಲ್ಲ ಇತರ ಎಲ್ಲಾ ವರ್ಗದವರಿಗೂ ಪ್ರಿಯವಾಗಿ ಬೆಳೆದು ನಿಂತದ್ದು ಒಂದು ಯಶೋಗಾಥೆ. ಆದರೆ ಈಗ ಕಾಲ ಬದಲಾಗಿದೆ. ದೇವಸ್ಥಾನದ ಪೌಳಿಯಲ್ಲಿ ಮದುವೆಯಾಗುವ ಜನರನ್ನು ಹುಡುಕಬೇಕಷ್ಟೇ. ನಮ್ಮವರು ಈಗ ಆಧುನಿಕ ಸವಲತ್ತುಗಳಿರುವ ಹೈಟೆಕ್ ಸಭಾಂಗಣಗಳನ್ನು ಹುಡುಕುತ್ತಿದ್ದಾರೆ ಹಾಗೂ ಅಂತಹಾ ಸಭಾಂಗಣಗಳು ನಮ್ಮವರಿಗೆ ಕೆಂಪುಹಾಸಿನ ಸ್ವಾಗತವನ್ನಿತ್ತು ಕರೆಯುತ್ತಿವೆ. ಉಡುಪಿಯ ಶ್ರೀ ಶಾರದಾಮಂಟಪವೂ ನಮ್ಮ ಗ್ರಾಹಕರ ನಾಡಿಮಿಡಿತವನ್ನು ಸಂವೇದಿಸಿಕೊಂಡು ಬದಲಾಗಬೇಕಾದ ಕಾಲ ಬಂದಿದೆ.

ಶ್ರೀ ಶಾರದಾಮಂಟಪದ ಮುಖ್ಯ ಸಭಾಂಗಣವು ಇತ್ತೀಚೆಗಷ್ಟೇ ನವೀಕರಣಗೊಂಡಿದ್ದು ಗ್ರಾಹಕರ ಅಭಿಲಾಶೆಗಳಿಗೆ ಪೂರಕವಾಗಿಯೇ ಇದೆ. ಮುಖ್ಯ ಸಭಾಂಗಣಕ್ಕೆ ವಾತಾನೂಕೂಲದ ವ್ಯವಸ್ಥೆಗೆ ಬೇಡಿಕೆ ಇದೆ ಅನಿಸುತ್ತಿದೆ. ಆದುದರಿಂದ ಸ್ವಲ್ಪ ಸಮಯದಲ್ಲಿ ಇದೂ ನಮ್ಮ ಸವಲತ್ತುಗಳ ಪಟ್ಟಿಯನ್ನು ಕೂಡಿಕೊಳ್ಳಬಹುದು. ಆದರೆ ಮುಖ್ಯವಾಗಿ ಶ್ರೀ ಶಾರದಾ ಮಂಟಪದಲ್ಲಿ ಊಟದ ವ್ಯವಸ್ಥೆ ಸದ್ಯಕ್ಕೆ ಉತ್ತಮವಾಗಿಯೇ ಇದ್ದರೂ ಆಧುನಿಕ ಸೌಲಭ್ಯಗಳಿಗೆ ಅದು ಇನ್ನೂ ತೆರೆದುಕೊಳ್ಳಬೇಕಷ್ಟೇ. ಊಟದ ಹಾಲಿಗೆ ಹೊಸ ಸೂರು, ಹೊಸ ನೆಲ, ಹೊಗೆ ರಹಿತ ಅಡುಗೆ ಮನೆ, ನೈರ್ಮಲ್ಯ ಹಾಗೂ ಸ್ವಚ್ಚತೆಗೆ ಇನ್ನಷ್ಟು ಪ್ರಾಶಸ್ತ್ಯ, ಸ್ಟೀಮ್‌ಕುಕಿಂಗ್, ತೊಳೆದ ಪಾತ್ರೆ ಲೋಟೆಗಳ ಶುದ್ಧೀಕರಣದ ವ್ಯವಸ್ಥೆ, ಪ್ಲಾಸ್ಟಿಕ್ ತ್ಯಾಜ್ಯದ ನಿರ್ವಹಣೆ, ಹಸಿತ್ಯಾಜದ ವಿಲೇವಾರಿ, ಗೋಬರ್ ಗ್ಯಾಸ್ ಅಳವಡಿಕೆ ಹೀಗೆ ಹತ್ತು ಹಲವಾರು ಆಧುನಿಕ, ನಿರ್ಮಲ ಹಾಗೂ ಪರಿಸರ ಸ್ನೇಹಿ ಯೋಜನೆಗಳನ್ನು ಇಲ್ಲಿ ಅಳವಡಿಸಬೇಕಾಗಿದೆ. ಹೀಗೆ ಸದಾ ಮುಂಚೂಣಿಯಲ್ಲಿರುವ ಶ್ರೀ ಶಾರದಾ ಮಂಟಪವು ಈ ವ್ಯವಸ್ಥೆಯಲ್ಲಿಯೂ ಹೊಸ ಹೊಸ ಐಡಿಯಾಗಳನ್ನು ಸಮನ್ವಯಗೊಳಿಸಿ ತನ್ಮೂಲಕ ಅತ್ಯುತ್ತಮ ಡೈನಿಂಗ್ ಹಾಲ್‌ನ್ನು ತನ್ನಲ್ಲಿ ಅಳವಡಿಸಿಕೊಂಡು ನಂಬರ್ ಒನ್ ಸ್ಥಾನವನ್ನು ಉಳಿಸಿಕೊಳ್ಳಲಿ ಎಂದು ಹಾರೈಸುತ್ತ ಸಮಾಜ ಬಾಂಧವರಿಂದ ಹಾಗೂ ನಮ್ಮ ಗ್ರಾಹಕರಿಂದ ಸಲಹೆ ಸೂಚನೆಗಳನ್ನು ಸ್ವಾಗತಿಸುತ್ತಿದ್ದೇವೆ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ




ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161, 97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

“ಶ್ರೀರಂಗ”, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ “ಗೃಹ ಸಾಲ” ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)





*With Best Compliments from :*

**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)



*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging





ಡಾ। ಸಂಜಾತ ವಿ. ಎಸ್.
B.D.S., MBA (HCS)
ಡೆಂಟಲ್ ಸರ್ಜನ್

ಬೆಳ್ಳೆ ಡೆಂಟಲ್ ಕೇರ್
(ಎಕ್ಸ್‌ರೇ ವ್ಯವಸ್ಥೆಯೊಂದಿಗೆ)
ಫರ್ನ್ಸ್ ಕಾಂಪ್ಲೆಕ್ಸ್,
ಬೆಳ್ಳೆ ಪಂಚಾಯತ್ ಎದುರು, ಮೂಡುಬೆಳ್ಳೆ
ಮೊಬೈಲ್. : 9449419097, 9448523635



**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66. ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್.7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೆಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ



# ಶ್ರೀಶಾರದಾ ಟ್ರೋಫಿ ಹಾಗೂ ಮಹಿಳಾವೇದಿಕೆಯ ಪಂದ್ಯಾಟಗಳ ವಿವರ

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದಲ್ಲಿ ಭಾಗವಹಿಸಿದ ತಂಡಗಳು :** ಉಡುಪಿಯ ಎರಡು ತಂಡಗಳು, ಬೆಂಗಳೂರಿನ ಎರಡು ತಂಡಗಳು, ನಂದಳಿಕೆಯ ಎರಡು ತಂಡಗಳು, ಸುರತ್ಕಲ್, ಬೆಳ್ತಂಗಡಿ, ಕಟಪಾಡಿ, ಪಡುಬಿದ್ರೆ, ಕುಂದಾಪುರ ಹಾಗೂ ಮಂದಾರ್ತಿ ತಂಡಗಳು.

## ಶ್ರೀ ಶಾರದಾ ಟ್ರೋಫಿ ಬಹುಮಾನಿತರ ವಿವರ

**ಪ್ರಥಮ ಬಹುಮಾನ (ವಿನ್ನರ್ಸ್ ) :** ನಂದಳಿಕೆ ಎ.ತಂಡ
(ಈ ಬಹುಮಾನದ ಪ್ರಾಯೋಜಕರು ಶ್ರೀ ಅಲೆವೂರು ಶ್ಯಾಮರಾವ್)

**ದ್ವಿತೀಯ ಬಹುಮಾನ (ರನ್ನರ್ಸ್ ಅಪ್) :** ಬೆಂಗಳೂರು ಎಫ್.ಡಬ್ಲ್ಯೂ.ಎಫ್ ತಂಡ
(ಈ ಬಹುಮಾನದ ಪ್ರಾಯೋಜಕರು ಶ್ರೀ.ಸಿ.ಎಸ್.ರಾವ್ ಮಾಜಿ ಅಧ್ಯಕ್ಷರು)

**ಸೆಮಿಫೈನಲ್ ತಲುಪಿದವರು :** 1. ಬೆಂಗಳೂರು ಜೆ.ಸಿ.ಟಿ 2. ಕುಂದಾಪುರ ರೋಕರ್ಸ್
(ಬಹುಮಾನದ ಮೊತ್ತವನ್ನು ನೀಡಿದವರು ವೈ.ಭುವನೇಂದ್ರರಾವ್, ಮಾಜಿ ಅಧ್ಯಕ್ಷರು)

**ಉತ್ತಮ ಬೌಲರ್ :** ಜೆ.ಸಿ.ಟಿ ಬೆಂಗಳೂರು ತಂಡದ ಅಭಿಲಾಷ್
**ಉತ್ತಮ ಬ್ಯಾಟ್ಸ್‌ಮ್ಯಾನ್ :** ನಂದಳಿಕೆ ಎ. ತಂಡದ ಪ್ರಮೋದ್
**ಉತ್ತಮ ಆಲ್ ರೌಂಡರ್ :** ನಂದಳಿಕೆ ಎ ತಂಡದ ರಿತೇಶ್
(ಈ ಮೂರು ಬಹುಮಾನಗಳ ಪ್ರಾಯೋಜಕರು ಶ್ರೀ ಜಯರಾಮರಾವ್ ಕೋಶಾಧಿಕಾರಿ)

## ಜ್ಯೂನಿಯರ್ಸ್ ಕ್ರಿಕೆಟ್ ಪಂದ್ಯಾಟದ ಸ್ಪರ್ಧೆಯ ಬಹುಮಾನ

**ಪ್ರಥಮ ಬಹುಮಾನ :** ಮಂದಾರ್ತಿಯ ಶ್ರೀದುರ್ಗಾ ಕ್ರಿಕೆಟರ್ಸ್
**ದ್ವಿತೀಯ ಬಹುಮಾನ :** ಉಡುಪಿಯ ಶ್ರೀ ಶಾರದಾ ತಂಡ

## ಮಹಿಳಾವೇದಿಕೆಯಿಂದ ನಡೆದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ

**ಶ್ರೀಶಾರದಾ ಮಂಟಪದಲ್ಲಿ 06-01-2019ರಂದು ಮಹಿಳಾ ವೇದಿಕೆಯ ವತಿಯಿಂದ ಮಕ್ಕಳು ಹಾಗೂ ಮಹಿಳೆಯರಿಗೆ ನಡೆದ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ ಹೀಗಿದೆ :-**

**3 ವರ್ಷದ ಒಳಗಿನ ಮಕ್ಕಳಿಗೆ 1.ಚಾಕಲೇಟ್ ಹೆಕ್ಕಿ ತರುವುದು :** ಪ್ರಥಮ : ವಿಹಾರ್, ದ್ವಿತೀಯ : ಮನನ್ **2.ನಿಂಬೆ ಹಣ್ಣನ್ನು ಹೆಕ್ಕುವುದು :** ಪ್ರಥಮ : ಅಲೋಕ್, ದ್ವಿತೀಯ : ಶ್ರದ್ಧಾ

**3 ರಿಂದ 5 ವರ್ಷದ ಒಳಗಿನ ಮಕ್ಕಳಿಗೆ 1. ನಿಂಬು ಪಾಸ್ ಮಾಡುವುದು :** ಪ್ರಥಮ : ಪಾವನ, ದ್ವಿತೀಯ : ನಂದಿತ **2. ಚಾಕಲೇಟ್ ಹೆಕ್ಕಿ ತರುವುದು :** ಪ್ರಥಮ : ಶ್ರೀದೇವಿ, ದ್ವಿತೀಯ : ನಂದಿತ

**1ನೇ ತರಗತಿಯಿಂದ 4ನೇ ತರಗತಿಯವರೆಗಿನ ಮಕ್ಕಳಿಗೆ 1. ಲಿಂಬೆ ಹಣ್ಣಿನ ಓಟ :** ಪ್ರಥಮ : ಪ್ರಣತಿ, ದ್ವಿತೀಯ : ಲಹರಿ **2. ಲೋಟಗಳನ್ನು ಹೊಂದಿಸುವುದು :** ಪ್ರಥಮ : ಸುಧೀಕ್ಷಾ, ದ್ವಿತೀಯ : ವೇದಾಂತ್ ಮತ್ತು ಅವ್ಯಕ್ತ

**5ನೇ ತರಗತಿಯಿಂದ 7ನೇ ತರಗತಿಯವರೆಗಿನ ಮಕ್ಕಳಿಗೆ 1. ಬಿಸ್ಕತ್‌ಗಳನ್ನು ಕೋಲಿನಲ್ಲಿ ನಿಲ್ಲಿಸುವುದು :** ಪ್ರಥಮ : ಅರುಂಧತಿ ಮತ್ತು ರವಿಪ್ರಸಾದ್ ದ್ವಿತೀಯ : ಅದಿತಿ **2. ಬಲೂನ್‌ನಿಂದ ಪಿರಮಿಡ್ ಮಾಡುವುದು :** ಪ್ರಥಮ : ವಿನೀಶ್ ಮತ್ತು ಅನೀಶ್, ದ್ವಿತೀಯ : ಪ್ರಜ್ವಲ್

**8ನೇ ತರಗತಿಯಿಂದ 10 ನೇ ತರಗತಿಯವರೆಗಿನ ಮಕ್ಕಳಿಗೆ 1. ಬೆಂಕಿಕಡ್ಡಿಗಳನ್ನು ಬೆರಳಿನಲ್ಲಿ ನಿಲ್ಲಿಸುವುದು :** ಪ್ರಥಮ : ಅದಿತಿ ಜಿ.ರಾವ್, ದ್ವಿತೀಯ : ಪಲ್ಲವಿ ರಾವ್ **2. ಚಮಚದಿಂದ ನಾಣ್ಯಗಳನ್ನು ಎತ್ತುವುದು :** ಪ್ರಥಮ : ಅದಿತಿ ಜಿ. ರಾವ್, ದ್ವಿತೀಯ : ಅಕ್ಷಯ ಕುಮಾರ್

**ಪಿಯುಸಿಯಿಂದ ಡಿಗ್ರಿಯವರಿಗೆ 1. ಚಮಚದಿಂದ ಚಮಚವನ್ನು ಎತ್ತುವುದು :** ಪ್ರಥಮ : ಮಾನಸಾ ರಾವ್, ದ್ವಿತೀಯ : ರಕ್ಷಿತಾ ಮತ್ತು ರಕ್ಷಾ

**22 ವರ್ಷ ಮೇಲ್ಪಟ್ಟವರಿಗೆ ಹಲ್ಲು ಚುಚ್ಚುವ ಕಡ್ಡಿಯನ್ನು ಸ್ಟ್ರಾಕ್ಕೆ ಸಿಕ್ಕಿಸುವುದು :** ಪ್ರಥಮ : ಪಾವನ, ದ್ವಿತೀಯ : ಪೂರ್ಣಿಮಾ ಹೆಬ್ಬಾರ್ ಮತ್ತು ಪೂರ್ಣಿಮಾ ಪಿ.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

### ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.04-03-2019, ಸೋಮವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘು ಉಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ

## ಶ್ರೀಶಾರದಾ ಕ್ರಿಕೆಟ್ ಹಾಗೂ ಮಹಿಳಾ ಕ್ರೀಡಾಕೂಟದ ಪ್ರಾಯೋಜಕರು

**ಶ್ರೀ ಅಲೆವೂರು ಶಾಮರಾವ್ :** ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿಗಳಾದ ಶ್ರೀ ಅಲೆವೂರು ಶಾಮರಾಯರು ತಮ್ಮ ಮಾತಾಪಿತರಾದ ಶ್ರೀ ಭುಜಂಗರಾವ್ ಹಾಗೂ ಶ್ರೀಮತಿ ಶಾಂತಾ ರವರ ಸ್ಮರಣಾರ್ಥ ಹತ್ತು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿತ್ತು ಶ್ರೀಶಾರದಾ ಕಪ್‌ನ ಪ್ರಥಮ ಬಹುಮಾನವನ್ನು ಪ್ರಾಯೋಜಿಸಿದ್ದಾರೆ.




**ಶ್ರೀ ಸಿ.ಎಸ್.ರಾವ್:** ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಡಿ.ಜಿ.ಎಂ ಹಾಗೂ ನಮ್ಮ ಸಂಘದ ಸಲಹೆಗಾರರಾದ ಚಿಟ್ಪಾಡಿ ಸರ್ವೋತ್ತಮರಾಯರು ಆರು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿತ್ತು ಶ್ರೀ ಶಾರದಾ ಕಪ್‌ನ ದ್ವಿತೀಯ ಬಹುಮಾನವನ್ನು ಪ್ರಾಯೋಜಿಸಿದ್ದಾರೆ.



**ಶ್ರೀ ವೈ. ಭುವನೇಂದ್ರರಾವ್:** ನಿವೃತ್ತ ಮುಖ್ಯೋಪಾಧ್ಯಾಯರು, ನಮ್ಮ ಸಂಘದ ನಿಕಟಪೂರ್ವ ಅಧ್ಯಕ್ಷರು ಹಾಗೂ ಸಲಹೆಗಾರರಾದ ಶ್ರೀ ವೈ.ಭುವನೇಂದ್ರರಾವ್ ಇವರು ತಮ್ಮ ಮಾತಾಪಿತರಾದ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಹಾಗೂ ಶ್ರೀಮತಿ ಗಿರಿಜಮ್ಮನವರ ಸ್ಮರಣಾರ್ಥ ನಾಲ್ಕು ಸಾವಿರ ರೂಪಾಯಿ ದೇಣಿಗೆಯಾಗಿತ್ತು ಸೆಮಿಫೈನಲ್ ತಲುಪಿದವರ ಬಹುಮಾನಗಳನ್ನು ಪ್ರಾಯೋಜಿಸಿದ್ದಾರೆ.



**ಶ್ರೀ ಬಜೆ ಜಯರಾಮ ರಾವ್ :** ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಉದ್ಯೋಗಿ, ನಮ್ಮ ಸಂಘದ ಕೋಶಾಧಿಕಾರಿ ಹಾಗೂ ಶ್ರೀ ಶಾರದಾ ಸೊಸೈಟಿಯ ನಿರ್ದೇಶಕರಾದ ಶ್ರೀ ಬಜೆ ಜಯರಾಮ ರಾಯರು ಮೂರು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿತ್ತು ಶ್ರೇಷ್ಠ ದಾಂಡಿಗ, ಅತ್ಯುತ್ತಮ ಬೌಲರ್, ಆಲ್‌ರೌಂಡರ್ ಪ್ರಶಸ್ತಿಗಳನ್ನು ಪ್ರಾಯೋಜಿಸಿದ್ದಾರೆ.



**ಶ್ರೀ ಮಾಂಟ್ರಾಡಿ ಮೋಹನ್ ರಾವ್ :** ಸುಂಕ ಹಾಗೂ ಅಬಕಾರಿ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀ ಮಾಂಟ್ರಾಡಿ ಮೋಹನ ರಾಯರು ಐದು ಸಾವಿರ ರೂಪಾಯಿಗಳನ್ನು ಕ್ರೀಡಾನಿಧಿಗೆ ದೇಣಿಗೆಯಾಗಿತ್ತು ಪ್ರೋತ್ಸಾಹಿಸಿದ್ದಾರೆ.

ಇವರೊಂದಿಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಶ್ರೀ ಜಿ.ಕೆ.ಕೋಲ್ಪೆ , ಶ್ರೀ ಬಿ. ಕೃಷ್ಣಮೂರ್ತಿ ರಾವ್, ಶ್ರೀಮತಿ ಪೂರ್ಣಿಮಾ ಪಿ.ರಾವ್, ಶ್ರೀಮತಿ ಉಷಾ ಮೋಹನ್‌ದೇವ್, ಶ್ರೀಮತಿ ಗೀತಾ ರಾವ್ ಇವರು ದೇಣಿಗೆ ನೀಡಿರುತ್ತಾರೆ. ಡಾ। ವೈ. ಸುದರ್ಶನ್ ರಾವ್ ಇವರಿಂದ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನಿಂದ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರೋತ್ಸಾಹಕ ಬಹುಮಾನವು ನೀಡಲ್ಪಟ್ಟಿದೆ. ಇವರೆಲ್ಲರಿಗೂ ಸಂಘದ ಪರವಾಗಿ ಧನ್ಯವಾದಗಳು.

## ಶ್ರೀ ಸುಬ್ರಹ್ಮಣ್ಯ ಸಭಾದ 109ನೇ ವರ್ಷದ ಮಹಾಸಭೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು ತಾ. 23-12-2018ನೇ ರವಿವಾರ ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ಆರಂಭವಾಯಿತು. ಶ್ರೀ ಭುಜಂಗ ರಾವ್ ಯು ಹಾಗೂ ಶ್ರೀಮತಿ ಸುನಿಲ ದಂಪತಿಗಳು ಪೂಜೆಯ ಯಜಮಾನರಾಗಿ ಭಾಗವಹಿಸಿದರು. ಅಡುಗೆ ಸ್ಪರ್ಧೆಯು ಖಾರ ಮತ್ತು ಸಿಹಿ ವಿಭಾಗದಲ್ಲಿ ಕೆಳಗಿನ ಸಭಾಂಗಣದಲ್ಲಿ ನಡೆದರೆ ರಂಗೋಲಿ ಸ್ಪರ್ಧೆಯು 2 ವಿಭಾಗದಲ್ಲಿ ಮೇಲಿನ ಸಭಾಂಗಣದಲ್ಲಿ ನಡೆಯಿತು. 11 ಗಂಟೆಗೆ ಸರಿಯಾಗಿ ಮಹಾಸಭೆಯು ಅಧ್ಯಕ್ಷರಾದ ಶ್ರೀ. ಎಂ. ಆರ್ ವಾಸುದೇವರ ಸ್ವಾಗತದೊಂದಿಗೆ ಆರಂಭಗೊಂಡಿತು. 2017-18ರ ವರ್ಷದ ಪರಿಶೋಧಿತ ಲೆಕ್ಕಪತ್ರ, ಆಡಿಟ್ ವರದಿ, 2018-19ರ ಅಂದಾಜು ಆಯವ್ಯಯ ಪಟ್ಟಿಯನ್ನು ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಹಾಗೂ ಖಜಾಂಜಿ ಶ್ರೀ ಪಿ. ಶ್ರೀಕಾಂತ್ ರಾವ್ ರವರು ಮಂಡಿಸಿ ಸದಸ್ಯರ ಅನುಮೋದನೆ ಪಡೆದುಕೊಂಡರು. ಆಡಳಿತ ಮಂಡಳಿಗೆ ಹೊಸ ನಿರ್ದೇಶಕರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಯಿತು, ಶ್ರೀ ಅನಿಲ್ ರಾವ್ ಬಿ. ಎಸ್. ಧನ್ಯವಾದ ನೀಡಿದರು. ಆಡಳಿತ ಮಂಡಳಿಯು ಸಭೆಯಲ್ಲಿ ಶ್ರೀ ಹರ್ಷ ಕುಮಾರ್ ಕೇದಿಗೆ (ಅಧ್ಯಕ್ಷರು), ಡಾ. ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್ (ಉಪಾಧ್ಯಕ್ಷರುಗಳು), ಶ್ರೀ ಕರುಣ್ ರಾವ್ ಬೆಳ್ಳೆ (ಕಾರ್ಯದರ್ಶಿ) ಶ್ರೀ ಅನಿಲ್ ರಾವ್, ಬಿ. ಎಸ್., ಶ್ರೀ ಚೇತನ್ ಶರ್ಮ (ಜೊತೆ ಕಾರ್ಯದರ್ಶಿಗಳು) ಶ್ರೀ ಪಿ. ಶ್ರೀಕಾಂತ್ ರಾವ್ (ಕೋಶಾಧಿಕಾರಿ) ಸರ್ವಾನುಮತದಿಂದ ಆಯ್ಕೆಗೊಂಡರು. ಭೋಜನದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಬಹುಮಾನ ವಿತರಣೆ, ಧನ್ಯವಾದ ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಮಹಿಳಾ ವೇದಿಕೆಯ ಶ್ರೀ ಶೈಲಜಾ ಶ್ರೀಕಾಂತ್ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಕುಸುಮಾ ನವೀನ್ ಕುಮಾರ್, ಡಾ. ಜಯಲಕ್ಷ್ಮೀ, ಯುವ ವೇದಿಕೆಯ ಶ್ರೀ ಮನೀಶ್ ರಾವ್ ಯು, ಶ್ರೀ ಸುರೇಶ್ ಕಡಬ, ಶ್ರೀ ಅನಿಲ್ ನೆಲ್ಲಿಕುಂಜೆ ವ್ಯವಸ್ಥೆಗಳಲ್ಲಿ ಸಹಕರಿಸಿದರು.

ಅಡುಗೆ ಸ್ಪರ್ಧೆಯ ಬಹುಮಾನಗಳನ್ನು ಶ್ರೀ ಅಶೋಕ ಕುಮಾರ್ ನಂದಾವರ ಪ್ರಾಯೋಜಿಸಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ “ಸ್ಕೋಲರ್ಸ್ ಡೇ”



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.16-12-2018 ರ ರವಿವಾರದಂದು “ಸ್ಕೋಲರ್ಸ್ ಡೇ” ನಡೆಯಿತು. ಶ್ರೀ ಸಭಾದಿಂದ ವಿತರಿಸಲಾದ ವಿದ್ಯಾರ್ಥಿ ವೇತನದ ಫಲಾನುಭವಿಗಳಿಗೆ ಮಾರ್ಗದರ್ಶನ ನೀಡುವ ಒಂದು ದಿನದ ಕಾರ್ಯಾಗಾರವಿದು. ಈ ಕಾರ್ಯಾಗಾರ ದಲ್ಲಿ ಉಪಾಧ್ಯಕ್ಷ ಡಾ. ಎ. ಪಿ. ಕೃಷ್ಣ, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಎಂ. ಆರ್ ವಾಸುದೇವ್, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. , ಖಜಾಂಚಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಚಂದ್ರಕಾಂತ ಇನ್ನ ಇವರು ಭಾಗವಹಿಸಿದ್ದರು. ಪ್ರಥಮ ಗೋಷ್ಠಿಯಲ್ಲಿ ABCD ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಇನ್ನ ರವರು ಶಿಸ್ತು ಮತ್ತು ಮೇಧಾವಿತನದಿಂದ ಹೇಗೆ ಉನ್ನತ ಹುದ್ದೆಯ ಮೆಟ್ಟಿಲುಗಳನ್ನು ಏರಲು ಸಾಧ್ಯವೆಂದು ತಮ್ಮ ಸ್ವಂತ ಯಶಸ್ವಿನ ಉದಾಹರಣೆ ಸಹಿತ ತಿಳಿಸಿದರು. ಎರಡನೇ ಗೋಷ್ಠಿಯಲ್ಲಿ ಮಾತನಾಡಿದ “ಉದಯವಾಣಿ” ಬ್ಯೂರೋ ಚೀಫ್ ಶ್ರೀ ಮನೋಹರ ಪ್ರಸಾದ ಸಮಾಜದಿಂದ ಪಡೆದದನ್ನು ಸಮಾಜಕ್ಕೆ ಹಿಂತಿರುಗಿಸಿ ಇತರರಿಗೆ ಮಾದರಿಯಾಗಬೇಕು ಮತ್ತು ಶ್ರೀ ಸಭಾದ ಈ ಕಾರ್ಯಕ್ರಮ ಮುಂದುವರಿಯಲು ಸಹಕಾರಿಯಾಗಬೇಕೆಂಬ ಕಿವಿಮಾತನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಕೊನೆಯ ಗೋಷ್ಠಿಯಲ್ಲಿ ಮಾತನಾಡಿದ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಮಾಜಿ ನಿರ್ದೇಶಕರಾದ ಶ್ರೀ ಎಂ. ಆರ್. ವಾಸುದೇವ್ ಇವರು ಸರಕಾರಿ ಉನ್ನತ ಹುದ್ದೆಗಳ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕೆಂಬ ಸಲಹೆಗಳನ್ನು ಹಾಗೂ ಬ್ರಾಹ್ಮಣ ಸಮಾಜವು ಈ ಹುದ್ದೆಗೇರ ಬೇಕಾದ ಅಗತ್ಯತೆ ಬಗ್ಗೆ ತಿಳಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿ ವೇತನ ನಿಧಿಗಳಿಗೆ ಸುಮಾರು ರೂ. 2 ಲಕ್ಷಗಳನ್ನು ನೀಡಿದ ಶ್ರೀ ಶ್ರೇಯಸ್ ಬೆಳ್ಳೆಯವರನ್ನು ಗಣ್ಯರ ಉಪಸ್ಥಿತಿಯಲ್ಲಿ ಸನ್ಮಾನಿಸಲಾಯಿತು.

ಸುಮಾರು 30 ಕ್ಕಿಂತಲು ಹೆಚ್ಚಿನ ಆಯ್ದ ವಿದ್ಯಾರ್ಥಿಗಳಿಗೆ ರೂ. 35 ಲಕ್ಷಕ್ಕಿಂತಲೂ ಅಧಿಕ ಮೊತ್ತದ ವಿದ್ಯಾರ್ಥಿ ವೇತನಗಳನ್ನು ವಿತರಿಸಲಾಯಿತು. ಸೇರಿದ ವಿದ್ಯಾರ್ಥಿಗಳು ಮತ್ತು ಹೆತ್ತವರು ಈ ಗೋಷ್ಠಿಗಳ ಸಂವಾದಗಳಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

## ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಮಾವೇಶ



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘ (ರಿ.) ಹೊಸ್ಕೋಟೆ ಅಂಚೆ ಕೆರ್ಗಾಲು ಇದರ 24ನೇ ವಾರ್ಷಿಕೋತ್ಸವ ಸಮಾರಂಭವು ದಿನಾಂಕ 30/12/2018 ರಂದು ಶ್ರೀಮತಿ ವಸಂತಿ ಮತ್ತು ಶ್ರೀ ಮಂಜುನಾಥ ಹೆಬ್ಬಾರ್ ತೆಂಕಬೈಲು ಇವರ ಪ್ರಾಯೋಜಕತ್ವದಲ್ಲಿ ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಸ್ಥಾನದ “ಬ್ರಾಹ್ಮಿ ಸಭಾಂಗಣ”ದಲ್ಲಿ ಜರಗಿತು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಜೆ. ಕೃಷ್ಣಗೋಪಾಲ ಹೆಬ್ಬಾರ್ (ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಸಂಘ (ರಿ)) ಇವರು ವಹಿಸಿದ್ದರು. ಶ್ರೀ ಮಂಜುನಾಥ ಹೆಬ್ಬಾರ್ ತೆಂಕಬೈಲು ಇವರು ದೀಪ ಬೆಳಗಿಸುವ ಮುಖಾಂತರ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಾ.ಬಿ.ಎಸ್.ಸತೀಶ ರಾವ್ ಮುಖ್ಯ ಪ್ರಾಧ್ಯಾಪಕರು ಮಾಹೆ ವಿಶ್ವವಿದ್ಯಾನಿಲಯ ಮಣಿಪಾಲ ಭಾಗವಹಿಸಿದ್ದರು.

ವಿಶೇಷ ಗೌರವ ಪುರಸ್ಕೃತರಾಗಿ ಶ್ರೀ. ಲೋಕೇಶ ಅಡಿಗ (ನಾಗಯಕ್ಷಿ ಪಾತ್ರಿಗಳು) ಬಡಾಕೆರೆ ನಾವುಂದ ಮತ್ತು ಪ್ರಾಂತೀಯ ಧರ್ಮಾಧಿಕಾರಿಗಳು ಶ್ರೀ ಶಾರದಾ ಪೀಠ ಶೃಂಗೇರಿ ಇವರನ್ನ ಸನ್ಮಾನಿಸಲಾಯಿತು. ಇನ್ನೋರ್ವ ಅತಿಥಿ ಶ್ರೀ ಸಚ್ಚಿದಾನಂದ ಚಾತ್ರ ಆಡಳಿತ ಮೊಕ್ತೇಸರರು. ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಸ್ಥಾನ ಇವರು ಆಗಮಿಸಿದ್ದರು

ಹಿರಿಯ ಸಮಾಜ ಬಾಂಧವರಾದ ಶ್ರೀ ಎಚ್.ಕೃಷ್ಣಯ್ಯ, ಶ್ರೀಮತಿ ಲಕ್ಷ್ಮೀ ಅಮ್ಮ ಮತ್ತು ಎಮ್. ವಾಸುದೇವ ಶ್ಯಾನುಭಾಗ್ ದಂಪೆತಿಗಳು ಮತ್ತು ಶ್ರೀಮತಿ ಸರೋಜಿನಿ ವಿ. ರಾವ್ ಇವರನ್ನು ಸನ್ಮಾನಿಸಲಾಯಿತು. ವಿಶೇಷ ಸಾಧಕರಾಗಿ ಶ್ರೀ ಶೇಷಗಿರಿ ಹೆಬ್ಬಾರ್ ಇವರನ್ನು ಸನ್ಮಾನಿಸಲಾಯಿತು.

ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನವನ್ನು ಶ್ರೀ ಉದಯಕುಮಾರ್ ಹೆಬ್ಬಾರ್ ಇವರ ಪ್ರಾಯೋಜಕತ್ವದಲ್ಲಿ ನೀಡಲಾಯಿತು. ಹೆಚ್ಚಿನ ಅಂಕ ಪಡೆದವರನ್ನು ಸನ್ಮಾನಿಸಲಾಯಿತು. ಆಟೋಟ ಸ್ಪರ್ಧೆ ನಡೆಸಿ ಬಹುಮಾನ ವಿತರಿಸಲಾಯಿತು. ಶ್ರೀ ಸುರೇಶ ಹೆಬ್ಬಾರ್ ತೆಂಕಬೈಲು ಕಾರ್ಯಕ್ರಮವನ್ನು ನಿರೂಪಿಸಿ ಸಂಪತ್ ಕುಮಾರ್ ಇವರ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯ ವಾಯಿತು.

## ಸಂಪನ್ನಗೊಂಡ 2018ರ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ 2018ನೇ ಸಾಲಿನ ವಾರ್ಷಿಕ ಮಹಾಸಭೆಯು ಬೆಂಗಳೂರಿನ ಕೋಡಿಗೆಹಳ್ಳಿಯಲ್ಲಿರುವ ಜ್ಞಾನಶಕ್ತಿ ಮಂಟಪದಲ್ಲಿ ದಿನಾಂಕ 16-12-2018 ರಂದು ನಡೆಸಲಾಯಿತು. ಅಂದು ಬೆಳಗ್ಗೆ 9.30ಕ್ಕೆ ಸಭಾದ ಅಧ್ಯಕ್ಷರಾದ ಶ್ರೀ ರವೀಂದ್ರನಾಥ ಬೆಳ್ಳೆಯವರ ಅಧ್ಯಕ್ಷತೆಯಲ್ಲಿ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ನಂತರ ಕರಕುಶಲ ಪ್ರದರ್ಶನವನ್ನು ಉದ್ಘಾಟಿಸಲಾಯಿತು. ಪ್ರದರ್ಶನದಲ್ಲಿ ಶ್ರೀಯುತ ಮಂಜುನಾಥ್ ಮತ್ತು ಕುಟುಂಬದವರಿಂದ ರಚಿಸಲ್ಪಟ್ಟ ಕಲಾಕೃತಿಗಳನ್ನು ಇಡಲಾಗಿತ್ತು. ಅನಂತರ ಪ್ರತಿವರುಷದಂತೆ ಈ ವರುಷವೂ ಭಗವತ್ಪಾದ ಸೇರಿದ ಸಮಾಜದ ಸದಸ್ಯರ ಆತ್ಮಕ್ಕೆ ಶಾಂತಿಕೋರಲಾಯಿತು. ಸುಮಾರು 11.30 ಕ್ಕೆ ಆರಂಭಗೊಂಡ ಮಹಾಸಭೆಯ ಆರಂಭದಲ್ಲಿ ಸಂಘದ ಕಾರ್ಯದರ್ಶಿ ಯಾದ ಶ್ರೀ ಕೃಷ್ಣಾನಂದರವರು ವಾರ್ಷಿಕ ವರದಿಯನ್ನು ಓದಿದಲ್ಲದೆ ಜೊತೆಗೆ ಸಂಘದ ಖಜಾಂಚಿಯವರಾದ ಶ್ರೀ ಸುಬ್ರಾಯ ಉಬರಳೆರವರು ಸಂಘದ ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿ ಅದಕ್ಕೆ ಮಹಾಸಭೆಯ ಅನುಮೋದನೆಯನ್ನು ಪಡೆಯಲಾಯಿತು. ನಂತರ ಸಂಘದ ಕಾರ್ಯಕಾರಿ ಸದಸ್ಯರಾದ ಶ್ರೀಶಾಂತ್ ಹಾಗು ರಾಜೇಶ ಅಜ್ಜಾವರ ರವರು ಸಂಘದ ಉಪ ಸಮಿತಿಗಳ ಕಾರ್ಯಸಾಧನೆಗಳನ್ನು, ಅವುಗಳ ಮುಂದಿನ ಸಾಧನೆಯ ಗುರಿಗಳನ್ನು ಈ ಬಾರಿಯ ಪವರ್‌ಪಾಯಿಂಟ್‌ನ ಮೂಲಕ ಎಲ್ಲಾ ಸದಸ್ಯರ ಮನಕ್ಕೆ ಮುಟ್ಟುವಂತೆ ತಿಳಿಸಿ ಎಲ್ಲರ ಗಮನ ಸೆಳೆದರು.

ನಂತರ ಶ್ರೀ ಎಂ.ಆರ್ ಸತ್ಯನಾರಾಯಣ ಹಾಗೂ ಶ್ರೀ ಎಸ್ ಎಸ್ ಯವರನ್ನು ಸನ್ಮಾನಿಸಲಾಯಿತು. ಸಂಘದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಪ್ರತಿಭಾವಂತ ಹಾಗೂ ರ್‍ಯಾಂಕ್ ವಿಜೇತ ಮಕ್ಕಳನ್ನು ಪುರಸ್ಕರಿಸಲಾಯಿಸಿ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕೊನೆಯಲ್ಲಿ ಶಾಂತಿ ಮಂತ್ರಪಠಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams





**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## ಶುಭ ವಿವಾಹ

ಕಟಪಾಡಿ ಶ್ರೀಮತಿ ಅನಸೂಯ ಮತ್ತು ಶ್ರೀ ಪದ್ಮಾನಂದರಾವ್‌ರವರ ಪುತ್ರಿ **ಅಂಕಿತಾ** ಮತ್ತು ಬೆಳ್ಳರ್ಪಾಡಿ ಶ್ರೀಮತಿ ಅಕ್ಷತಾ ಮತ್ತು ಕೀರ್ತಿಶೇಷ ಉದಯಕುಮಾರ್ ರವರ ಪುತ್ರ **ವಿಘ್ನೇಶ್** ಇವರ ವಿವಾಹವು ಉಡುಪಿ ಚಿಟ್ಪಾಡಿಯ ಶ್ರೀ ಸರಸ್ವತಿ ಸಭಾಭವನದಲ್ಲಿ ತಾ.10–12–2018ರಂದು ನೆರವೇರಿತು

★★★★ ★★★★

ಮೈಸೂರಿನ ಶ್ರೀಮತಿ ವಿದ್ಯಾ ಮತ್ತು ಶ್ರೀ ರವಿಶಂಕರ ಕೆ.ಜಿ ಇವರ ಪುತ್ರಿ **ಶ್ರೇಯ** ಹಾಗೂ ಶ್ರೀಮತಿ ಭಾರತಿ ಮತ್ತು ಶ್ರೀ ಅಲೆವೂರು ರಮೇಶರಾವ್ ಇವರ ಪುತ್ರ **ಅವಿನಾಶ** ಇವರ ವಿವಾಹವು 12.12.2018ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು

★★★★ ★★★★

ಹಿರಿಯಡ್ಕ ಶ್ರೀ ಗಂಗಾಧರ ಪಿ.ಎಮ್ ಮತ್ತು ಶ್ರೀಮತಿ ಪದ್ಮ ಇವರ ಪುತ್ರ **ಜೀವನ್** ಹಾಗೂ ಶ್ರೀ ಸತ್ಯೇಂದ್ರ ಶರ್ಮ ಮತ್ತು ಶ್ರೀಮತಿ ದಯಾ ಶರ್ಮ ಇವರ ಪುತ್ರಿ **ಶ್ರೇಯಸಿ** ಇವರ ವಿವಾಹವು ಉಡುಪಿಯ ಕಿದಿಯೂರು ಹೋಟೆಲಿನ ಮಾಧವ ಕೃಷ್ಣ ಹಾಲ್ ನಲ್ಲಿ ತಾ 12–12–2018ರಂದು ನೆರವೇರಿತು

★★★★ ★★★★

ಶ್ರೀ ಪ್ರಕಾಶ್ ಕೋಟೆ ಮತ್ತು ಶ್ರೀಮತಿ ಸರಸ್ವತಿ ಕೋಟೆ ಇವರ ಪುತ್ರ **ಆದಿತ್ಯ** ಮತ್ತು ಶ್ರೀ ಎಸ್.ವಿ.ರಾಮಚಂದ್ರ ಜೋಯಿಸ್ ಮತ್ತು ಶ್ರೀಮತಿ ಶ್ರೀದೇವಿ ಇವರ ಪುತ್ರಿ **ಸಾಗರಿಕಾ** ಇವರ ವಿವಾಹವು ಶ್ರೀ ದುರ್ಗಾಪರಮೇಶ್ವರಿ ಕಲಾಮಂದಿರ, ಕೇರ್ಪಳ, ಸುಳ್ಯ ಇಲ್ಲಿ ತಾ.17.12.2018ರಂದು ನೆರವೇರಿತು.

★★★★ ★★★★

ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಮುರಳೀಧರ ರಾವ್ ಇವರ ಪುತ್ರ **ಗಣೇಶ** ಮತ್ತು ಶ್ರೀಮತಿ ಆಶಾ ಮತ್ತು ಶ್ರೀ ಮಹೇಶ್ ಮುಂಬಯಿ ಇವರ ಪುತ್ರಿ **ಗಾಯತ್ರಿ** ಇವರ ವಿವಾಹವು ಸಿಂಫೋಮಿ ಬ್ಯಾಂಕೆಟ್ ಹಾಲ್, ಮುಂಬಯಿ ಇಲ್ಲಿ ತಾ.17–12–2018ರಂದು ನೆರವೇರಿತು.

ಮೂಡಬೆಟ್ಟು ಶ್ರೀಮತಿ ಭಾರ್ಗವಿ ಮತ್ತು ಶ್ರೀ ಹರಿದಾಸರಾವ್ ಇವರ ಪುತ್ರ **ಆದರ್ಶ** ಮತ್ತು ಪಡುಬೆಳ್ಳೆ ಶ್ರೀಮತಿ ರಮಾಪ್ರಭಾ ಮತ್ತು ಶ್ರೀ ಶ್ರೀಪತಿ ರಾವ್ ಇವರ ಪುತ್ರಿ **ಅರ್ಚನಾ** ಇವರ ವಿವಾಹವು ಉಡುಪಿ ಕಿನ್ನಿಮುಲ್ಕಿ ಶ್ರೀ ವೀರಭದ್ರ ಸಭಾಭವನದಲ್ಲಿ ತಾ.21–12–2018ರಂದು ನೆರವೇರಿತು

★★★★ ★★★★

ಪಡುಅಲೆವೂರು ಶ್ರೀಮತಿ ಶಾಂತಾ ಮತ್ತು ಶ್ರೀ ನಾಗರಾಜ ರಾವ್ ಇವರ ಪುತ್ರಿ **ರೇಖಾ** ಹಾಗೂ ಬೆಳ್ತಂಗಡಿ ಶ್ರೀಮತಿ ಪದ್ಮಿನಿ ಮತ್ತು ಶ್ರೀ ಅಶೋಕ್ ಕುಮಾರ್ ಇವರ ಪುತ್ರ **ಅಮೃತೇಶ್** ಇವರ ವಿವಾಹವು ಉಡುಪಿ ಚಿಟ್ಪಾಡಿಯ ಶ್ರೀ ಸರಸ್ವತಿ ಸಭಾಭವನದಲ್ಲಿ ತಾ27–12–2018ರಂದು ನೆರವೇರಿತು

★★★★ ★★★★

ಶ್ರೀಮತಿ ವಿದ್ಯಾವತಿ ಮತ್ತು ಶ್ರೀ ಸುಕುಮಾರ, ಕನ್ಯಾಡಿ ಇವರ ಪುತ್ರಿ **ನವ್ಯ** ಮತ್ತು ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀ ಕೇಶವ ರಾವ್ ಕಾರ್ಕಳ ಇವರ ಪುತ್ರ **ರಾಕೇಶ್** ಇವರ ವಿವಾಹವು ಉಜಿರೆಯ ಶ್ರೀ ರಾಮಕೃಷ್ಣ ಕಲ್ಯಾಣ ಮಂಟಪದಲ್ಲಿ ತಾ.27–12–2018ರಂದು ನೆರವೇರಿತು.

★★★★ ★★★★

ಶ್ರೀಮತಿ ಶಾರದಾ ಮತ್ತು ಶ್ರೀ ಉದಯ ಆನಂದ ರಾವ್ ಕುಲಕರ್ಣಿ ಇವರ ಪುತ್ರಿ **ಮಾಧವಿ** ಮತ್ತು ಶ್ರೀಮತಿ ಕವಿತಾ ಹಾಗೂ ಡಾ। ಸಂತೋಷ್ ಕುಮಾರ್ ಶಾಸ್ತ್ರಿ ಇವರ ಪುತ್ರ **ಪ್ರಣವ್** ಇವರ ವಿವಾಹವು ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಸಭಾಭವನದಲ್ಲಿ ತಾ.27–12–2018ರಂದು ನೆರವೇರಿತು.

★★★★ ★★★★

ಕೀರ್ತಿಶೇಷ ನಾರಾಯಣ ಶ್ಯಾನುಭೋಗ್ ಮತ್ತು ಶ್ರೀಮತಿ ಸುಮತಿ ಇವರ ಪುತ್ರಿ **ಸ್ವಾತಿ** ಮತ್ತು ಕೀರ್ತಿಶೇಷ ಬೆಳ್ಳೆ ವಸಂತ ಶರ್ಮ ಮತ್ತು ಶ್ರೀಮತಿ ಭುವನೇಶ್ವರಿ ಇವರ ಪುತ್ರ **ಅರವಿಂದ ಶರ್ಮ** ಇವರ ವಿವಾಹವು ನಾರಾವಿ ಸೂರ್ಯನಾರಾಯಣ ದೇವಸ್ಥಾನದ ಬಳಿ ಇರುವ ನೂತನ ಕಲ್ಯಾಣ ಮಂಟಪದಲ್ಲಿ ತಾ.28–12–2018ರಂದು ನೆರವೇರಿತು.

★★★★ ★★★★

ಶ್ರೀಮತಿ ನಾಗರತ್ನ ಮತ್ತು ಶ್ರೀ ಬಾಲಕೃಷ್ಣ ಮಾಳಾಪುರ ಇವರ ಪುತ್ರ **ಅಖಿಲೇಶ** ಮತ್ತು ಶ್ರೀಮತಿ ಹೇಮಲತಾ ಮತ್ತು ಶ್ರೀ ಪಿ.ವಿ ರಮೇಶ ಪಾಂಡೇಶ್ವರ ಇವರ ಪುತ್ರಿ **ನಮ್ರತಾ** ಇವರ ವಿವಾಹವು 30–12–2018 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು

## ಗೃಹಪ್ರವೇಶ

ಶ್ರೀಮತಿ ವಸಂತಿ ಪಟ್ಟಾಭಿರಾಮ ಸ್ವಾಮಿ ಹಾಗೂ ಮನೆಯವರು ಪಡುಬಿದ್ರೆ ಉದಯಾದ್ರಿಯಲ್ಲಿ ನಿರ್ಮಿಸಿದ ನೂತನ ಗೃಹ "ಅದ್ವೈತಂ"ನ ಗೃಹಪ್ರವೇಶ ಸಮಾರಂಭವನ್ನು ತಾ.22–12–2018ರಂದು ನೆರವೇರಿಸಿದರು.

★★★★ ★★★★

ಶ್ರೀಮತಿ ಮಾಲಿನಿ ಹಾಗೂ ಶ್ರೀ ಅಲೆವೂರು ವಿಷ್ಣುಮೂರ್ತಿ ರಾವ್ ಇವರು ಉಡುಪಿ ಲಕ್ಷ್ಮೀಂದ್ರನಗರದ ಆರನೇ ಕ್ರಾಸಿನಲ್ಲಿ ನೂತನವಾಗಿ ನಿರ್ಮಿಸಿದ ಗೃಹ "ಜಲಜ" ಇದರ ಗೃಹಪ್ರವೇಶ ಸಮಾರಂಭವನ್ನು ತಾ.24–12–2018ರಂದು ನೆರವೇರಿಸಿದರು.

## ಬ್ರಹ್ಮೋಪದೇಶ

**ಚಿ। ಶ್ರವಣ**

ಶ್ರೀಮತಿ ಉಮಾದೇವಿ ಮತ್ತು ಶ್ರೀ ಹರೀಶ ರಾವ್ ಇವರ ಸುಪುತ್ರ ಚಿ। ಶ್ರವಣನಿಗೆ ತಾ.30–12–2018ನೇ ರವಿವಾರ ಬೆಳ್ತಂಗಡಿ ಲಾಯಿಲದ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾಭವನದಲ್ಲಿ ಬ್ರಹ್ಮೋಪದೇಶವು ಜರುಗಿತು.

## ನಿಧನ

ಪೆರ್ಡೂರು ರಾಮಮೂರ್ತಿ ರಾವ್‌ರ ಪತ್ನಿ ಶ್ರೀಮತಿ ಅನುರಾಧ ರಾವ್ ಇವರ ತಾ.21–12–2018ರಂದು ನಿಧನ ಹೊಂದಿದರು.

★★★★ ★★★★

ಕಳಸ ಹಂದಿಗೋಡಿನ ಶ್ರೀ ಹೆಚ್.ಪಿ. ರಾಮಚಂದ್ರಯ್ಯ ಇವರ ಪತ್ನಿ ಶ್ರೀಮತಿ ಸೌಧಾಮಿನಿ ಇವರು ತಾ.13–12–2018ರಂದು ನಿಧನರಾದರು.

## ಹರಕೆ ಬಯಲಾಟ

ದಿನಾಂಕ 01–12–2018ನೇ ಶನಿವಾರ ರಾತ್ರಿ ತಂತ್ರಾಡಿ ಶ್ರೀಮತಿ ಮತ್ತು ಶ್ರೀ ಸೂರ್ಯ ನಾರಾಯಣ ಶ್ಯಾನುಭೋಗ್ ಇವರ ಮನೆಯ ವಠಾರದಲ್ಲಿ ಶ್ರೀ ದುರ್ಗಾಪರಮೇಶ್ವರೀ ದಶಾವತಾರ ಯಕ್ಷಗಾನ ಮೇಳ ಶ್ರೀ ಕ್ಷೇತ್ರ ಮಂದಾರ್ತಿ ಇವರಿಂದ ಶ್ರೀದೇವಿ ಮಹಾತ್ಮೆ ಪೌರಾಣಿಕ ಪ್ರಸಂಗದ ಪ್ರದರ್ಶನ ನಡೆಯಿತು. ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ 10–30ಕ್ಕೆ ಗಣಹೋಮ ಮತ್ತು ಮಧ್ಯಾಹ್ನ 12–30ಕ್ಕೆ ಅನ್ನಸಂತರ್ಪಣೆ ನೆರವೇರಿತು

## ಭಜನೆ–ಅಂಬೆಗಾಲಿಕ್ಕುತಲಿ

ಅಂಬೆಗಾಲಿಕ್ಕುತಲೀ....ಬಂದನೊಲವಿಂದ....

ಜಗದಂಬೆ ಪಾರ್ವತಿಯ....ಒಲವಿನ ಮುದ್ದುಕಂದ....
ಅಂಬೆಗಾಲಿಕ್ಕುತಲೀ.... ॥ಪಲ್ಲವಿ॥

ಕಾಲಲಂದುಗೆ ಗೆಜ್ಜೆ....ಕಿಂಕಿಣಿಯ ಮಾಡಿರಲು....
ಬಂಗಾರ ನೇವಳವು ....ಹೊಳೆಹೊಳೆಯುತಿರಲು....
ಹವಳ ಮುತ್ತಿನ ಸರವು....ಕುತ್ತಿಗೆಯ ಸುತ್ತಿರಲು....
ನವಿಲನೊಡನಾಡುತಲಿ....ಚೆಲುವ
ಮೂರುತಿಯು....॥೧॥
ಅಂಬೆಗಾಲಿಕ್ಕುತಲೀ....ಬಂದನೊಲವಿಂದ....

ಪುಟ್ಟ ಹೆಜ್ಜೆಯನಿಟ್ಟು....ಪುಟಪುಟನೆ ನೆಗೆಯುತ್ತ
ಬೆಳ್ಳಿ ಬೆಟ್ಟದ ಮನೆಯ....ಅಂಚಿನಿಂದ....
ಎಲ್ಲಿ ಬೀಳುವನೆಂದು....ಮಾತೆಡೆದರುತ ಬಂದು....
ಕಟ್ಟಿ ಹಾಕಿದಳಂದು....ಪುಟ್ಟ ಬಾಲಕನನ್ನು....॥೨॥
ಅಂಬೆಗಾಲಿಕ್ಕುತಲೀ....ಬಂದನೊಲವಿಂದ....

ಕುಕ್ಕುಟನು ಬಳಿಬಂದು....ನೊಂದ ಬಾಲನ ಕಂಡು....
ಕಟ್ಟುಗಳ ಹರಿದಿರಲು....ಜಗಜಟ್ಟಿಯು....
ಮಾತೆ ಮುಂದಕೆ ಬಂದು....ತುಂಟನಗೆ ನಗುತಿರಲು....
ಎತ್ತಿ ಮುದ್ದಾಡಿದಳು....ದಿಟ್ಟ ಬಾಲಕನನ್ನು ....॥೩॥
ಅಂಬೆಗಾಲಿಕ್ಕುತಲೀ....ಬಂದನೊಲವಿಂದ....

ದುಷ್ಟದನುಜರ ಕೊಲ್ಲುವ....ಗಟ್ಟಿಗನು ಇವನೆಂದು
ಅಷ್ಟ ದಿಕ್ಪಾಲಕರು....ಒಡಗೂಡಿ ಬಂದು....
ಸುರರ ಸಂಕಷ್ಟಗಳ....ನಷ್ಟಗೊಳಿಸುವನೆಂದು
ಷಷ್ಠಿ ಗೊಡೆಯನ ಸ್ತುತಿಸಿ....
ನಲಿದಾಡುತಿರಲು....॥೪॥
ಅಂಬೆಗಾಲಿಕ್ಕುತಲೀ....ಬಂದನೊಲವಿಂದ....

ಜಗದಂಬೆ ಪಾರ್ವತಿಯ....
ಒಲುಮೆಯ ಮುದ್ದುಕಂದ....
ಅಂಬೆಗಾಲಿಕ್ಕುತಲೀ....

ಶ್ರೀ ಶ್ರೀ ಶ್ರೀ

**– ಅಪಯಶ, ಬೆಂಗಳೂರು**




ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894


ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

SAMPATH KUMAR Mobile : 9741508881
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಯುವ ವಿಪ್ರ ವೇದಿಕೆ ಅಧ್ಯಕ್ಷರಾಗಿ ಆಯ್ಕೆ



ಮಣಿಪಾಲದ ಎಂ. ಐ. ಟಿ. ಯಲ್ಲಿ ಸಹಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವ ಡಾ. ಸಂಪತ್ ಕುಮಾರ್ ಇವರು "ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಯುವವಿಪ್ರವೇದಿಕೆ" ಇದರ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡಿರುತ್ತಾರೆ. ಇವರು ಈ ಹಿಂದೆ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿಯೂ ಮತ್ತು 2012ನೇ ಇಸವಿಯಲ್ಲಿ ನಡೆದ "ಅಖಿಲ ಭಾರತ ಸ್ಥಾನಿಕ ಸಮಾವೇಶ"ದಲ್ಲಿ ವಿಚಾರ ಸಂಕಿರಣಗಳನ್ನು ನಡೆಸುವ ಜವಾಬ್ದಾರಿಯನ್ನೂ ಯಶಸ್ವಿಯಾಗಿ ನಿರ್ವಹಿಸಿರುತ್ತಾರೆ. ಇವರು ಕುಂಭಾಸಿಯಲ್ಲಿ ನೆಲೆಸಿರುವ ಶ್ರೀ. ಐ. ಪಿ. ರವೀಂದ್ರರಾಯರ ಪುತ್ರರಾಗಿದ್ದು, ಮಣಿಪಾಲದಲ್ಲಿ "ಕುಮುದಾ ಹೆಲ್ತ್ ಟೆಕ್" ಎನ್ನುವ ಕಂಪೆನಿಯನ್ನು ಸ್ಥಾಪಿಸಿ ಮುನ್ನಡೆಸುತ್ತಿದ್ದಾರೆ.

## ಡಾ। ಚೈತ್ರಾ ರಾವ್‌ರವರ ಭರತನಾಟ್ಯ




ಸಗ್ರಿ ಶ್ರೀ ವಾಸುಕಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಷಷ್ಠಿ ಮಹೋತ್ಸವ-ಶ್ರೀ ಚಂಡಿಕಾ ಹೋಮ-ನಾಗಮಂಡಲ ಸೇವೆಯ ಪ್ರಯುಕ್ತ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದುಷಿ ಡಾ। ಚೈತ್ರ ರಾವ್ ಪಿ. ಪರ್ಕಳ ಇವರು ನೀಡಿದ ಭರತನಾಟ್ಯ ನೃತ್ಯ ಸೇವೆಯು ಭಕ್ತಾಭಿಮಾನಿಗಳ ಹಾಗೂ ಕಲಾರಸಿಕರ ಮನಸ್ಸನ್ನು ಮುದಗೊಳಿಸಿತು.

### ಆಮಂತ್ರಣ

ಶ್ರೀ ಶಾರದಾ ಯಕ್ಷಗಾನ ಹವ್ಯಾಸಿ ಕಲಾವಿದರು ಶಾರದಾಮಂಟಪ ಕುಂಜಿಬೆಟ್ಟು ಉಡುಪಿ ಇವರು ದಿನಾಂಕ 09.02.2019ನೇ ಶನಿವಾರ ರಾತ್ರಿ 7ರಿಂದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಚೊಕ್ಕಾಡಿ, ಕಟಪಾಡಿಯಲ್ಲಿ (ಬ್ರಹ್ಮಕಲಶೋತ್ಸವದ ಪ್ರಯುಕ್ತ)

**"ಭೀಷ್ಮ ವಿಜಯ" (ಅಂಬಾ ಶಪಥ)**

ಎಂಬ ಯಕ್ಷಗಾನವನ್ನು ಆಡಿ ತೋರಿಸಲಿರುವರು ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

### ಆಮಂತ್ರಣ

ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವರ

**32ನೇ ಪ್ರತಿಷ್ಠಾ ವಾರ್ಷಿಕೋತ್ಸವವು**

ಫೆಬ್ರವರಿ 12-02-2019ನೇ ಮಂಗಳವಾರ ರಥ ಸಪ್ತಮಿಯಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು.

ಸಮಾಜ ಬಾಂಧವರೆಲ್ಲರಿಗೂ ಆದರದ ಆಮಂತ್ರಣ

– ಆಡಳಿತ ಮಂಡಳಿ

## ಶ್ರೇಷ್ಠ ಕೃಷಿಕ ಪ್ರಶಸ್ತಿ



ಕುಕ್ಕಿಕಟ್ಟೆಯ ಸುರೇಶ್‌ರಾವ್ (ಪುಟ್ಟ ಭಟ್) ರವರಿಗೆ ಹೈನುಗಾರಿಕೆಯಲ್ಲಿ ಆಧುನಿಕ ಪದ್ಧತಿಯನ್ನು ಅಳವಡಿಸಿ ಹಸುಗಳ ಸಾಕಾಣಿಕೆಗೆ ಅಂತರಾಷ್ಟ್ರೀಯ ರೈತರ ದಿನಾಚರಣೆ ಪ್ರಯುಕ್ತ ತಾಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಯನ್ನು ಜಿಲ್ಲಾ ಉಸ್ತುವಾರಿ ಸಚಿವೆ ಜಯಮಾಲಾ ಅವರು ನೀಡಿ ಸನ್ಮಾನಿಸಿದರು.



### ಕೃಷಿ ಪಂಡಿತ ಪ್ರಶಸ್ತಿ

ಮಂದಾರ್ತಿಯ ಶ್ರೀ ದುರ್ಗಾರೈತ ಸೇವಾ ಕೂಟದ ಅಧ್ಯಕ್ಷರು ಹಾಗೂ ವಿಜಯ ಗ್ರಾಮೀಣ ಅಭಿವೃದ್ಧಿ ಸಮಿತಿ ಮಂದಾರ್ತಿ ಇದರ ಅಧ್ಯಕ್ಷರೂ ಆಗಿರುವ ಶ್ರೀ ಕೆ. ಶಂಭುಶಂಕರ ರಾವ್ ರವರು 2016-17ರ ಸಾಲಿನ ರಾಜ್ಯಮಟ್ಟದ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿ ಸ್ವೀಕರಿಸಿದರು.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

ತಾ.24-01-2019 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)


ತಾ.01-02-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.25-01-2019 ಮತ್ತು ತಾ.10-02-2019 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮಕರ ಮಾಸದ ವಿಶೇಷ ದಿನಗಳು

| | | | |
|---|---|---|---|
| 14-01-2019 | ಮಕರ ಸಂಕ್ರಮಣ | 31-01-2019 | ಸರ್ವೈಕಾದಶಿ |
| 15-01-2019 | ಉತ್ತರಾಯಣ ಪುಣ್ಯಕಾಲ ಉಡುಪಿ ಚೂರ್ಣೋತ್ಸವ | 04-02-2019 | ಅಮಾವಾಸ್ಯೆ |
| 17-01-2019 | ಸರ್ವೈಕಾದಶಿ | 05-02-2019 | ಶಿಶಿರ ಋತು, ಮಾಘ ಮಾಸದ ಶುಕ್ಲಪಕ್ಷಾರಂಭ |
| 20-01-2019 | ಪ್ರವಾಸ | 13-02-2019 | ಕುಂಭ ಸಂಕ್ರಮಣ |
| 21-01-2019 | ಹುಣ್ಣಿಮೆ | 16-02-2019 | ಸರ್ವೈಕಾದಶಿ |
| 22-01-2019 | ಹೇಮಂತ ಋತು, ಪುಷ್ಯ ಮಾಸದ ಕೃಷ್ಣಪಕ್ಷಾರಂಭ | 19-02-2019 | ಹುಣ್ಣಿಮೆ |
| 24-01-2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.51 | 20-02-2019 | ಶಿಶಿರ ಋತು, ಮಾಘ ಮಾಸದ ಕೃಷ್ಣಪಕ್ಷಾರಂಭ |




**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

– ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ಶುಭಾಶಯಗಳು



### ಶ್ರೀ ಹರ್ಷ ಕುಮಾರ್ ಕೇದಗೆ ಮತ್ತು ಶ್ರೀಮತಿ ಕನಕವಲ್ಲಿ ಹರ್ಷಕುಮಾರ್

**ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು ಇದರ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಹರ್ಷ ಕುಮಾರ್‌ರವರಿಗೂ ಮತ್ತು ಲಯನೆಸ್ ಕ್ಲಬ್‌ನಲ್ಲಿ ತಮ್ಮ ಸಮಾಜ ಸೇವೆಗಾಗಿ ವಿಶೇಷ ಪ್ರಶಸ್ತಿ ಪಡೆದ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್‌ರವರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು**

ಶ್ರೀಮತಿ ಸ್ವಾತಿ ಪ್ರಮೋದ್ ಮತ್ತು ಶ್ರೀ ಪ್ರಮೋದ್ ಕುಮಾರ್ ಕೇದಗೆ,
ಪ್ರಮೋದ್ ಆಟೋಮೊಬೈಲ್ಸ್ ಮಂಗಳೂರು.
ಶ್ರೀಮತಿ ಪ್ರತಿಭಾ ಪ್ರಭಾಕರ ಮತ್ತು ಶ್ರೀ ಪ್ರಭಾಕರ ಭಂಡಿ ಪೆರ್ಡೂರು.
ಓಂ ಪಂಚಶ್ರೀ ಪೆರ್ಡೂರು.
ಶ್ರೀಮತಿ ಪ್ರೀತಿಕಾ ಅಭಿಷೇಕ್ ಮತ್ತು ಶ್ರೀ ಅಭಿಷೇಕ್ ರಾವ್
ರಾಮಮೂರ್ತಿನಗರ ಬೆಂಗಳೂರು
ಮಾಸ್ಟರ್ ಹಾರ್ದಿಕ್‌ಕುಮಾರ್ ಮತ್ತು ಕುಮಾರಿ ಅನನ್ಯ.

## ಶುಭಾಶಯಗಳು



### ಚಿ। ವಿಘ್ನೇಶ್ ಮತ್ತು ಚಿ। ಸೌ। ಅಂಕಿತಾ

**ನೂತನ ವಧೂವರರಿಗೆ ಶುಭಕೋರುವ**

ಶ್ರೀಮತಿ ಅನಸೂಯ ಮತ್ತು ಶ್ರೀ ಎಮ್. ಪದ್ಮಾನಂದರಾವ್ ಕಟಪಾಡಿ ಉಡುಪಿ
ಮತ್ತು ಮಾ। ಆಶ್ಲೇಷ್
ಶ್ರೀಮತಿ ಸುಲೋಚನ ಮತ್ತು ಶ್ರೀ ಸುಬ್ರಹ್ಮಣ್ಯರಾವ್ ಹಾಗೂ ಸಹೋದರರು ಕಟಪಾಡಿ
ಶ್ರೀ ಎಮ್.ಸದಾನಂದರಾವ್ ಮತ್ತು ಮಕ್ಕಳು, ಚಿಟ್ಪಾಡಿ
ಶ್ರೀಮತಿ ಅಕ್ಷತಾ ಉದಯ್‌ಕುಮಾರ್‌ರಾವ್
ಶ್ರೀಮತಿ ಕುಸುಮ ಮತ್ತು ಶ್ರೀ ಹರಿನಾರಾಯಣ ಭಂಡಿ ಪೆರ್ಡೂರು.
ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ರಾಜಶೇಖರ ಮೇರ್ಟ ಬೆಂಗಳೂರು
ಶ್ರೀಮತಿ ಆಶಾ ಟಿ. ಮತ್ತು ಶ್ರೀ ಯು.ಅರವಿಂದ್‌ಕುಮಾರ್ ಉಡುಪಿ
ಶ್ರೀಮತಿ ಮಮತಾ ಹರೀಶ್ ರಾವ್ ಧರ್ಮಸ್ಥಳ
ಶ್ರೀಮತಿ ಸಂಧ್ಯಾ ಮತ್ತು ಶ್ರೀ ವಿದ್ಯಾಧರ ರಾವ್ ಚಿಕ್ಕಮಗಳೂರು
ರಾಮನ್ ಲ್ಯಾಬ್ ಎಕ್ವ್ಯೂಪ್‌ಮೆಂಟ್ಸ್ ಮತ್ತು ಕೆಮಿಕಲ್ಸ್ ಉಡುಪಿ

## ಸವಿನಯ ಆಮಂತ್ರಣ





### ಶೋಭಾಯಮಾನ ಸ್ಟುಡಿಯೋ
### ಬೆಳ್ಳಿ ಬೆಳಕು–1994–2019

* ಬೆಳುವಾಯಿಯಲ್ಲಿ 1994 ರ ವಿಜಯದಶಮಿಯ ಪರ್ವಕಾಲದಲ್ಲಿ ಛಾಯಾಚಿತ್ರಾಲಯದಲ್ಲಿ "ಶೋಭಾ" ಸ್ಟುಡಿಯೋ ಶುಭಾರಂಭ.
* ನನ್ನ ಗುರುಗಳು ಕಾರ್ಕಳದ ಐಡಿಯಲ್ ಸ್ಟುಡಿಯೋ ಯಜಮಾನ ಕೆ.ಹರಿಶ್ಚಂದ್ರ ರಾವ್ ಅವರಿಂದ ದೀಪ ಪ್ರಜ್ವಲನ.
* ಅಲ್ಪಾವಧಿಯಲ್ಲೇ ಜನಮೆಚ್ಚುಗೆಯ ಚಿತ್ರಾಲಯ ಎಂಬ ಬೆಳಕು ಹರಿಯಿತು.
* ಉತ್ತಮ ಗುಣಮಟ್ಟ ಹೊಂದಿದ ಫೋಟೋ ವಿಡಿಯೋ ಚಿತ್ರೀಕರಣದೊಂದಿಗೆ ಮುಂದುವರಿಯಿತು.
ನೂರಾರು ಹಿತೈಷಿ ಗ್ರಾಹಕರ ಬೆಂಬಲದೊಂದಿಗೆ ಬೆಳೆಯಿತು.
* 2004 ರಲ್ಲಿ ದಶಮ ಸಂಭ್ರಮದ ಆಚರಣೆ, ದೇವತಾರಾಧನೆ, ಕಲಾರಾಧನೆ, ಸಮಾರಾಧನೆ ಹುಟ್ಟೂರು ಮಿಜಾರಿನಲ್ಲಿ ಜರಗಿತು.
* 2009ರಲ್ಲಿ ಮಿಜಾರು–ಎಡಪದವಿನಲ್ಲಿ ಮತ್ತೊಂದು ಅಂಗಸಂಸ್ಥೆ "ಶೋಭಾ" ಅಸ್ತಿತ್ವಗೊಂಡಿತು.
* ಹತ್ತಾರು ಕಾರ್ಯಕರ್ತರನ್ನೊಳಗೊಂಡ ಚಿತ್ರಕಲಾರಂಗ ಭದ್ರವಾಗಿ ಬೇರೂರಿತು. ಅನೇಕ ಶಿಷ್ಯವರ್ಗಕ್ಕೆ ದಾರಿದೀಪವಾಯಿತು.
* 2011 ರಲ್ಲಿ ಈ "ಶೋಭಾ" ಮೂಡಬಿದಿರೆಯಲ್ಲಿ ಚಿಗುರೊಡೆಯಿತು.
* ಕರಾವಳಿಯಾದ್ಯಂತ ನಾಟಕ–ನಾಗಮಂಡಲ, ಆಟ–ಕೂಟ, ಅಂಕ–ಆಯನಗಳ ಚಿತ್ರೀಕರಣದ ಸಂಸ್ಥೆ ಇಮ್ಮಡಿಯಾಯಿತು.
* 2015 ರಲ್ಲಿ ಬೆಳುವಾಯಿ ನೂತನ ಸ್ವಂತ ಕಟ್ಟಡಕ್ಕೆ ಸ್ಟುಡಿಯೋ ಸ್ಥಳಾಂತರಗೊಂಡಿತು.
* ಪೇಜಾವರ ಮಠಾಧೀಶರ ದಿವ್ಯ ಅನುಗ್ರಹದೊಂದಿಗೆ, ನನ್ನ ಮಾತೃಶ್ರೀಯವರಿಂದ ಮತ್ತೆ ದೀಪ ಬೆಳಗಿತು. ಕಟೀಲು ಮೇಳದ ಯಕ್ಷ ಸೇವೆ, ಗಣ್ಯರ ಆಗಮನ, ಆಶೀರ್ವಾದ.
* ವೃತ್ತಿಗೆ ಪೂರಕ–ಪ್ರೇರಕ ಮಹನೀಯರ ಸಂಮಾನ ಸಂತರ್ಪಣೆ ಹೀಗೆ 20 ರ ಸಂಭ್ರಮ ಜರಗಿತು.
* ಸಾಮಾಜಿಕ ಕಳಕಳಿ, ಚಿಂತನೆ, ಸೇವಾಮನೋಭಾವ ಬೆಳೆಸಿಕೊಂಡು ಬೆಳೆದ ಜನೋಪಕಾರಿ ಸಂಸ್ಥೆ ಎಂದು ಎಲ್ಲರ ಪ್ರೀತಿಗೆ ಪಾತ್ರವಾಗಿರುವುದು ನಮಗೆ ತೃಪ್ತಿ ನೀಡಿತು.

ಹೀಗೆ ನನ್ನ ಬದುಕಿನಲ್ಲಿ ಚಿತ್ರೀಕರಣವನ್ನೇ ಮೂಲ ವೃತ್ತಿಯಾಗಿ ಸ್ವೀಕರಿಸಿ, ಪ್ರವೃತ್ತಿಯಲ್ಲಿ ಯಕ್ಷಗಾನ ಕಲೆಯ ಬಲವನ್ನು ಬೆಳೆಸಿಕೊಂಡು ಸಾಗಿದೆ. ಎರಡರಲ್ಲೂ ನನಗೆ ಹೆಗಲೆಣೆಯಾದವರು ಬಹುಮಂದಿ. ನಿಮ್ಮೆಲ್ಲರ ಆಶೀರ್ವಾದದಿಂದ 25 ರ ಸಾರ್ಥಕ ವಸಂತ ಪೂರೈಸಿದ

" ಶೋಭಾ ಸ್ಟುಡಿಯೋ "

ಬೆಳ್ಳಿ ಬೆಳಕಿನ ಸಂದರ್ಭ ನನ್ನ ಆಭಾರ ಮನ್ನಣೆ ಸಲ್ಲಿಸುತ್ತಿದ್ದೇನೆ.

ಎಮ್. ದೇವಾನಂದ ಭಟ್ ಬೆಳುವಾಯಿ
ಮೊ: 9845644556

ಶೋಭಾ ಡಿಜಿಟಲ್ ಸ್ಟುಡಿಯೋ & ವೀಡಿಯೋ ಬೆಳುವಾಯಿ 08258–276177 • ಮೂಡಬಿದಿರೆ 9901995655 • ಎಡಪದವು 0824–2256374 • ಮಂಗಳೂರು ದ.ಕ • email : shobhadigitalstore@gmail.com - mdevanandbhat@gmail.com



ರನ್ನರ್ಸ್ ಆಪ್ ಟ್ರೋಫಿಯೊಂದಿಗೆ ಬೆಂಗಳೂರು ಎಫ್.ಡಬ್ಲ್ಯು.ಎಫ್. ತಂಡ



ಮುಖ್ಯಅತಿಥಿ ಡಾ| ಸಂಜಾತರಿಂದ ಬಹುಮಾನ ವಿತರಣೆ



ಜೂನ್ಯಿಯರ್ ಕ್ರಿಕೆಟ್ ವಿನ್ನರ್ಸ್ ತಂಡ....



ಕ್ರೀಡಾಕೂಟದ ಸಭಾಕಾರ್ಯಕ್ರಮ....



ಜೂನ್ಯಿಯರ್ಸ್ ಕ್ರಿಕೆಟ್ ಪಂದ್ಯಾಟದ ಒಂದು ನೋಟ....



ಸಮಾರೋಪ ಸಭೆ.....


**With Best Compliments From :**

Land™ Trades
BUILDERS & DEVELOPERS


UPGRADE TO A
NEW LIFESTYLE
Premium Projects in Mangalore










9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

**With Best Compliments From :**

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org